ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೊಂದನೆಯ ಅಧಿವೇಶನ

ಮಂಗಳವಾರ, ದಿನಾಂಕ: 29ನೇ ಸೆಪ್ಟಂಬರ್, 2020

ಪ್ರಕಾಶ್ ಸ್ಪಾಂಜ್ ಕೈಗಾರಿಕೆ ಕುರಿತು

ಶ್ರೀ ಹೆಚ್.ಎಂ. ರಮೇಶ್ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :-

961(1017) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಹೆಗ್ಗೆರೆ ಹಳ್ಳಿಯಲ್ಲಿ ಪ್ರಕಾಶ್ ಸ್ಪಂಜ್ ಐರನ್ ಮತ್ತು ಪವರ್ ಪ್ರೈವೇಟ್ ಲಿಮಿಟೆಡ್ ಎನ್ನುವ ಕಾರ್ಖಾನೆ ಕಾರ್ಯಾಚರಣೆ ನಡೆಸುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ;

(ಆ) ಈ ಕಾರ್ಖಾನೆ ನಡೆಯುತ್ತಿರುವ ಗ್ರಾಮ ಕೈಗಾರಿಕಾ ವಲಯದ ಪರಿದಿಗೆ ಸೇರುತ್ತದೆಯೇ; ಇಲ್ಲಿ ಎಷ್ಟು ಸ್ಥಳೀಯ ಕಾರ್ಮಿಕರಿದ್ದಾರೆ, ಎಷ್ಟು ಹೊರರಾಜ್ಯದ ಕಾರ್ಮಿಕರಿದ್ದಾರೆ; (ವಿವರ ನೀಡುವುದು)

(ಇ) ಸದರಿ ಕಾರ್ಖಾನೆ ಹೊರಸೂಸುತ್ತಿರುವ ವಿಷ ವಾಯುವಿನಿಂದ ಸುತ್ತಮುತ್ತಲಿನ ಕೃಷಿ ಚಟುವಟಿಕೆಗಳ ಮೇಲೆ ಪರಿಣಾಮ ವುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಸಾಮಾಜಿಕ ಹೊಣೆಗಾರಿಕೆಯಡಿ ಈ ಖಾಸಗಿ ಕಾರ್ಖಾನೆ ಪ್ರಾರಂಭವಾದ ದಿನದಿಂದ ಎಷ್ಟು ಜನಪರ ಮತ್ತು ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿದೆ? (ಸಂಪೂರ್ಣ ಮಾಹಿತಿ ನೀಡುವುದು)